699(1151) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಹಲವು ವರ್ಷಗಳಿಂದ ಗಣಿಗಾರಿಕೆ ಮಾಡಿದ ಜಾಗದಲ್ಲಿ ತಗ್ಗು ಗುಂಡಿಗಳಿಂದ ಧನಕರುಗಳು ಸಾವನ್ನಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದುವರೆವಿಗೂ ಗಣಿಗಾರಿಕೆ ಮಾಡಿ ಗುಂಡಿ ತೋಡಿದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಗುಂಡಿಗಳನ್ನು ಮುಚ್ಚದಿರಲು ಕಾರಣಗಳೇನು;

ಈ) ಯಾವಾಗ ಈ ಗುಂಡಿಗಳನ್ನು ಮುಚ್ಚಲಾಗುವುದು (ವಿವರ ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬಂದಿರುವುದಿಲ್ಲ.

ಆ) ಅವಧಿ ಮುಗಿದ ಕೆಲವು ಪ್ರಕರಣಗಳಲ್ಲಿ ಗಣಿಗಾರಿಕೆಯಿಂದಾದ ಗುಂಡಿಗಳನ್ನು ಮುಚ್ಚಲು ನೋಟೀಸ್‌ಗಳನ್ನು ನೀಡಲಾಗಿದೆ ಹಾಗೂ ಜಾಲ್ತಿಯಲ್ಲಿರುವ ಗುತ್ತಿಗೆಗಳ ಅವಧಿ ಮುಕ್ತಾಯವಾದ ನಂತರ ಗುಂಡಿಗಳನ್ನು ಮುಚ್ಚಿ ಸಮತಟ್ಟು ಮಾಡಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ.

ಇ) ಬಹುಶಃ ಸದರಿ ಗುಂಡಿಗಳಲ್ಲಿ ನೀರು ತುಂಬುವುದರಿಂದ ಅಂತರ್ಜಲ ಅಭಿವೃದ್ಧಿಯಾಗುವ ಸಾಧ್ಯತೆ ಇರುವುದೆಂದು ತಿಳಿದು, ಗುಂಡಿಗಳನ್ನು ಮುಚ್ಚದೆ ಬಿಟ್ಟಿರುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ಈ) ಅವಧಿ ಮುಕ್ತಾಯವಾದ ಗಣಿಗುತ್ತಿಗೆದಾರರಿಗೆ ಗುಂಡಿಗಳನ್ನು ಮುಚ್ಚಲು ಹಲವು ಪ್ರಕರಣಗಳಲ್ಲಿ ನೋಟೀಸ್ ನೀಡಲಾಗಿದೆ. ಈ ಬಗ್ಗೆ ಸ್ಥಳ ಪರಿಶೀಲಿಸಿ ಗುಂಡಿಗಳನ್ನು ಮುಚ್ಚುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

700(1152) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಪ್ರಸಿದ್ಧ ಯಾತ್ರ ಸ್ಥಳವಾದ ಜೋಗದಲ್ಲಿರುವ ಕೆ.ಪಿ.ಸಿ. ವಸತಿ ನಿಲಯಗಳು ಸಂಪೂರ್ಣ ಹಾಳಾಗಿ ಬಿದ್ದುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ;

ಆ) ಈ ವಸತಿ ನಿಲಯಗಳನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)?

ಇ) ಶಾಲಾ ಶಿಕ್ಷಕರಿಗೆ ಈ ವಸತಿ ನಿಲಯಗಳನ್ನು ಹಂಚಿಕೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಹಾಗಿದ್ದಲ್ಲಿ, ಶಾಲಾ ಶಿಕ್ಷಕರಿಗೆ ವಸತಿ ನಿಲಯವನ್ನು ಹಂಚಿಕೆ ಮಾಡಲು ಇರುವ ತೊಂದರೆಯೇನು (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಜೋಗ ವಸಾಹತುವಿನಲ್ಲಿ ಹಾಲಿ 46 ರಿಂದ 48 ವರ್ಷಗಳ ಹಿಂದೆ ಕಟ್ಟಿರುವ 183 ತಾತ್ಕಾಲಿಕ ಮನೆಗಳು ಇರುತ್ತವೆ. ಅವುಗಳಲ್ಲಿ 124 ಮನೆಗಳು ಶಿಥಿಲಾವಸ್ಥೆಯಲ್ಲಿದ್ದು, ವಾಸಕ್ಕೆ ಯೋಗ್ಯವಾಗಿರುವುದಿಲ್ಲ. ಉಳಿದ 59 ಮನೆಗಳಲ್ಲಿ ನಿಗಮದ ಉದ್ಯೋಗಿಗಳು ವಾಸವಾಗಿರುತ್ತಾರೆ.

ಆ) ಈ ಮನೆಗಳು ವಾಸಕ್ಕೆ ಯೋಗ್ಯವಿಲ್ಲದಿರುವುದರಿಂದ, ಈ ಮನೆಗಳನ್ನು ಕೆಡವಿ ಶಾಶ್ವತ ಮನೆಗಳನ್ನು ನಿಗಮದ ಸಿಬ್ಬಂದಿಗಳ ಅವಶ್ಯಕತೆಯ ಆಧಾರದ ಮೇಲೆ ಹಂತ ಹಂತವಾಗಿ ನಿರ್ಮಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

701(1153) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಗರದ ಪಟ್ಟಣದಲ್ಲಿ ಖಾಸಗಿ ಒಡೆತನದ ಕಟ್ಟಡಗಳಲ್ಲಿರುವ ಸರ್ಕಾರಿ ಕಛೇರಿಗಳೆಷ್ಟು;

ಆ) ಸರ್ಕಾರದ ಒಡೆತನದ ಸರ್ಕಾರಿ ಕಛೇರಿಗಳಿರುವ ಕಟ್ಟಡಗಳ ಸಂಖ್ಯೆ ಎಷ್ಟು (ಕಛೇರಿವಾರು ವಿವರ ಒದಗಿಸುವುದು);

ಇ) ಖಾಲಿ ಇರುವ ಸರ್ಕಾರಿ ಕಟ್ಟಡಗಳೆಷ್ಟು (ವಿವರ ಒದಗಿಸುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ, ಬಂದರು ಮತ್ತು ಇಂಧನ ಸಚಿವರು):

ಅ) ಖಾಸಗಿ ಒಡೆತನದ ಕಟ್ಟಡಗಳಲ್ಲಿ ಇರುವ ಒಟ್ಟು ಸರ್ಕಾರಿ ಕಛೇರಿಗಳು 17 (ಕಛೇರಿವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ)

ಆ) ಸರ್ಕಾರದ ಒಡೆತನದ ಕಟ್ಟಡಗಳಲ್ಲಿ ಸರ್ಕಾರಿ ಕಛೇರಿಗಳು ಒಟ್ಟು 15 (ಕಛೇರಿವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ).

ಇ) ಯಾವುದೂ ಇರುವುದಿಲ್ಲ.